1. "ನೋಂದಾಯಿತ ಅಂಚೆ ಸ್ವೀಕೃತಿ ನಿರೀಕ್ಷೆ"

ನಗರ ಮತ್ತು ಗ್ರಾಮಾಂತರ ಯೋಜನಾ
ಹೆಚ್ಚುವರಿ [illegible]
ಮಿನಿ ವಿಧಾನ ಸೌಧ [illegible]-580 0[illegible]
[illegible] 0836-2447901.

ಹೆಚ್ಚುವರಿ ನಿರ್ದೇಶಕರ ಕಚೇರಿ,
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ,
ವಲಯ ಕಚೇರಿ
ಮಿನಿ ವಿಧಾನ ಸೌಧ, ಧಾರವಾಡ – 580 001.

ಇ ಮೇಲ್: addl.dtcp@ka.gov.in

ದೂರವಾಣಿ: 0836-2447901

ಸಂಖ್ಯೆ:-ನಗ್ರಾಯೋ/ವಕಧಾ/09/ವಿನ್ಯಾಸ-114/2018-19 /3020-23

ದಿನಾಂಕ:-16-03-2019

**" ತಾಂತ್ರಿಕ ಅನುಮೋದನೆ "**

**ವಿಷಯ:-** ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕು ಬಚಗಾಂವ ಗ್ರಾಮದ ರಿ.ಸ.ನಂ:50/1 ಕ್ಷೇತ್ರ:5ಎ-30ಗುಂಟೆ ಜಮೀನಿಗೆ ವಸತಿ ಉದ್ದೇಶಕ್ಕಾಗಿ ವಿನ್ಯಾಸಕ್ಕೆ ತಾಂತ್ರಿಕ ಅನುಮೋದನೆ ನೀಡುವ ಕುರಿತು.

**ಉಲ್ಲೇಖ:-**
1) ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ., ರವರ ಭೂಪರಿವರ್ತನೆ ಅಧಿಕೃತ ಜ್ಞಾಪನ (ಅನುಬಂಧ-5) ಸಂಖ್ಯೆ:- LAND10005301 ದಿನಾಂಕ:-02-08-2018.
2) ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ ಕಾರ್ಯಾಲಯ, ದೊಡ್ನಳ್ಳಿ., ರವರ ಪತ್ರ ಸಂಖ್ಯೆ:- ಗ್ರಾ.ಪಂ.ದೊ/ಭೂ.ಪ/2018-19/93 ದಿನಾಂಕ:-01-09-2018.
3) ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಶಿರಸಿ., ಇವರ ಕಛೇರಿ ಪತ್ರ ಸಂಖ್ಯೆ:-ನ.ಯೋ.ಸ.ನಿ.ಶಿ/ವಿನ್ಯಾಸ ನಕ್ಷೆ/ಸಿ.ಆರ್-15/2018-19/808, ದಿನಾಂಕ:-24-01-2019. (ಈ ಕಚೇರಿಯ ಸ್ವೀಕೃತಿ ದಿನಾಂಕ:-28-01-2019)
4) ಈ ಕಚೇರಿ ಪತ್ರ ಸಂಖ್ಯೆ:-ನಗ್ರಾಯೋ/ವಕಧಾ/09/ವಿನ್ಯಾಸ-106/2018-19/3595, ದಿನಾಂಕ:-05-02-2019.
5) ಈ ಕಚೇರಿ ಪತ್ರ ಸಂಖ್ಯೆ:-ನಗ್ರಾಯೋ/ವಕಧಾ/09/ವಿನ್ಯಾಸ-106/2018-19/3687, ದಿನಾಂಕ:-22-02-2019.
6) ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಶಿರಸಿ., ಇವರ ಕಛೇರಿ ಪತ್ರ ಸಂಖ್ಯೆ:-ನ.ಯೋ.ಸ.ನಿ.ಶಿ/ವಿನ್ಯಾಸ ನಕ್ಷೆ/ಸಿ.ಆರ್-15/2018-19/2017, ದಿನಾಂಕ:-19-02-2019. (ಈ ಕಚೇರಿಯ ಸ್ವೀಕೃತಿ ದಿನಾಂಕ:-25-02-2019)
7) ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತರಾಜ್ ಇಲಾಖೆ ಕೈಪಿಡಿ ಸಂಖ್ಯೆ:-ಗ್ರಾಅಪ 86 ಗ್ರಾಪಂಅ 2014, ದಿನಾಂಕ:-11-11-2014.

******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರನ್ವಯ ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕು ಬಚಗಾಂವ ಗ್ರಾಮದ ರಿ.ಸ.ನಂ:50/1 ಕ್ಷೇತ್ರ:5ಎ-30ಗುಂಟೆ ಜಮೀನಿಗೆ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತಿಸಿ ಕಂದಾಯ ಇಲಾಖೆಯಿಂದ ಅಧಿಕೃತ (ಅನುಬಂಧ-5) ಜ್ಞಾಪನಾ ಪತ್ರವನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ (2) ರಲ್ಲಿ ಸದರಿ ಭೂ ಪರಿವರ್ತಿತ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡುವಂತೆ ಕೋರಿ, ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ ಕಾರ್ಯಾಲಯ, ದೊಡ್ನಳ್ಳಿ., ರವರು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಶಿರಸಿ., ಇವರಿಗೆ ಪ್ರಸ್ತಾವನೆ ಸಲ್ಲಿಸಿ ವಸತಿ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಲು ಕೋರಿದ್ದು, ಉಲ್ಲೇಖ (3) ರಲ್ಲಿ ಪ್ರಶ್ನಿತ ಜಮೀನಿನ ವಿಸ್ತೀರ್ಣವು ಈ ಕಛೇರಿಯ ಕಾರ್ಯವ್ಯಾಪ್ತಿಗೆ ಬರುವುದರಿಂದ ಕರಡು ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಶಿರಸಿ., ಇವರು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಉಲ್ಲೇಖ (4) ರ ಈ ಕಛೇರಿ ಪತ್ರದಲ್ಲಿ ಪ್ರಸ್ತಾವನೆಗೆ ಕುರಿತು ಪರಿಶೀಲಿಸಲಾಗಿ, ಅಗತ್ಯ ಮಾಹಿತಿ / ದಾಖಲೆಗಳನ್ನು ಸಲ್ಲಿಸಲು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಶಿರಸಿ., ರವರಿಗೆ ತಿಳಿಸಲಾಗಿತ್ತು. ಹಾಗೂ ಅಗತ್ಯ ದಾಖಲೆ / ಮಾಹಿತಿ ಸಲ್ಲಿಕೆಯಾಗದೇ ಇರುವ ಕಾರಣ ಉಲ್ಲೇಖ (5) ರ ಈ ಕಛೇರಿ ಪತ್ರದ ಪ್ರಕಾರ ವಿಲೇಪಡಿಸಲಾಗಿರುತ್ತದೆ. ಮುಂದುವರೆದು ಅಗತ್ಯ ಉಲ್ಲೇಖ (6) ರಲ್ಲಿ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಶಿರಸಿ., ಇವರು ಮಾಹಿತಿ / ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ (3) & (6) ರಲ್ಲಿ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಶಿರಸಿ., ಇವರು ಸಲ್ಲಿಸಿರುವ ಮಾಹಿತಿ / ದಾಖಲೆಗಳನ್ನು ಹಾಗೂ ಕರಡು ವಸತಿ ವಿನ್ಯಾಸ ನಕ್ಷೆಯನ್ನು ಪರಿಶೀಲಿಸಿ, ರಸ್ತೆ ಪರಿಚಲನೆಯನ್ನು ಸೂಕ್ತವಾಗಿ ಮಾರ್ಪಾಡು ಮಾಡಿ ಯೋಜನಾ ತತ್ವಗಳಡಿಯಲ್ಲಿ ವಸತಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಲಾಗಿದೆ.

ಸದರಿ ವಿನ್ಯಾಸದಲ್ಲಿ ವಸತಿ ಉಪಯೋಗಕ್ಕಾಗಿ 12771.56 ಚ.ಮೀ (ಶೇ.54.90%), ಉದ್ಯಾನವನ / ಬಫರ್‌ಗಾಗಿ 1165.20 ಚ.ಮೀ (ಶೇ.05.00%), ನಾಗರೀಕ ಸೌಲಭ್ಯಕ್ಕಾಗಿ 1167.34 ಚ.ಮೀ. (ಶೇ.05.01%) ಮತ್ತು ರಸ್ತೆಗಾಗಿ 8165.00 ಚ.ಮೀ (ಶೇ.35.09%) ರಷ್ಟು ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಲಾಗಿದೆ. ವಸತಿಗಾಗಿ ಕಾಯ್ದಿರಿಸಲಾದ ಪ್ರದೇಶದಲ್ಲಿ, 12 ಮೀ. X 18 ಮೀ. ಅಳತೆಯ 01 ನಿವೇಶನಗಳನ್ನು, 9 ಮೀ. X 12 ಮೀ. ಅಳತೆಯ 81 ನಿವೇಶನಗಳನ್ನು, ಮತ್ತು 21 ಅನಿಯತ (ಅ) ನಿವೇಶನಗಳು ಸೇರಿದಂತೆ ಒಟ್ಟು 103 ನಿವೇಶನಗಳನ್ನು ನಿಗಧಿಪಡಿಸಿ ಅಳವಡಿಸಲಾಗಿದೆ.

ಸದರಿ ವಿನ್ಯಾಸವನ್ನು ಕಾರ್ಯಗತಗೊಳಿಸುವ ಸಂಬಂಧ ದೊಡ್ನಳ ಗ್ರಾಮ ಪಂಚಾಯತ ಕಾರ್ಯಾಲಯವು ವಿನ್ಯಾಸ ಅನುಮೋದನೆ ಆದೇಶ ಹೊರಡಿಸಬೇಕಾಗಿದ್ದು, ಉಲ್ಲೇಖ (7) ರ ಕೈಪಿಡಿಯಲ್ಲಿನ ಮಾರ್ಗಸೂಚಿಗಳನ್ನು ಹಾಗೂ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಅನುಸರಿಸುವ ನಿಬಂಧನೆಗೆ ಒಳಪಟ್ಟು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.

1. ವಿನ್ಯಾಸವು ಅನುಮೋದನೆ ದಿನದಿಂದ ಎರಡು ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸತಕ್ಕದ್ದು. (ಕೈಪಿಡಿಯ ಮಾರ್ಗಸೂಚಿಯನ್ವಯ)
2. ಅಭಿವೃದ್ಧಿ ಶುಲ್ಕವನ್ನು ಅಂದಾಜು ಪಟ್ಟಿಯಂತೆ ಹಾಗೂ ಇತರ ಶುಲ್ಕಗಳನ್ನು ಕಾನೂನು ಪ್ರಕಾರ ಹಾಗೂ ಸರ್ಕಾರಿ ಆದೇಶಗಳನ್ವಯ ಪಡೆಯತಕ್ಕದ್ದು.
3. ಅನುಮೋದಿತ ವಿನ್ಯಾಸದಲ್ಲಿರುವಂತೆಯೇ ನಿವೇಶನಗಳು, ರಸ್ತೆಗಳು ಮತ್ತಿತರ ಸಾರ್ವಜನಿಕ ಉದ್ದೇಶದ ಪ್ರದೇಶಗಳನ್ನು ಅಭಿವೃದ್ಧಿಪಡಿಸಬೇಕು.
4. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
5. ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರತಕ್ಕ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು, ಮತ್ತು ರಸ್ತೆಗಳ ಎರಡು ಕಡೆ ಹಾಗೂ ಉದ್ಯಾನವನದಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು.
6. ಸದರಿ ವಿನ್ಯಾಸದ ಜಮೀನುಗಳಲ್ಲಿ ಕಂದಾಯ ದಾಖಲಾತಿಯನ್ವಯ ಇರುವ 'ಬಿ' ಖರಾಬ್ ಪ್ರದೇಶವು ಸರ್ಕಾರಕ್ಕೆ ಸೇರಿದ್ದು, ಯಾವುದೇ ಒತ್ತುವರಿಗೆ ಅವಕಾಶವಿಲ್ಲದಂತೆ ಯಥಾ ರೀತಿ ಕಾಯ್ದಿರಿಸತಕ್ಕದ್ದು.
7. ಅನುಮೋದಿತ ವಸತಿ ವಿನ್ಯಾಸದಲ್ಲಿರುವ ರಸ್ತೆಗಳು 8165 ಚ.ಮೀ (ಶೇ.35.09%), ಉದ್ಯಾನವನ / ಬಫರ್ 1165.20 ಚ.ಮೀ (ಶೇ.05.00%), ನಾಗರೀಕ ಸೌಲಭ್ಯ 1167.34 ಚ.ಮೀ. (ಶೇ.05.01%), ಪ್ರದೇಶಗಳನ್ನು ಅರ್ಜಿದಾರರಿಗೆ / ಅಭಿವೃದ್ಧಿದಾರರಿಗೆ ಯಾವುದೇ ಪರಿಹಾರವನ್ನು ನೀಡದೆ ಮುಕ್ತಟಿಯಾಗಿ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಗ್ರಾಮ ಪಂಚಾಯತಿ ಪಡೆಯತಕ್ಕದ್ದು.
8. <u>ವಿನ್ಯಾಸವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರವೇ ಗ್ರಾಮ ಪಂಚಾಯಿತಿಯಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡತಕ್ಕದ್ದು.</u>
9. ನಿವೇಶನ ಬಿಡುಗಡೆಯ ಮೊದಲನೇ ಹಂತವಾಗಿ ಶೇ.60 ರಷ್ಟು ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅರ್ಜಿದಾರರು / ಅಭಿವೃದ್ಧಿದಾರರು ಒದಗಿಸಿದ ನಂತರ ಉಳಿಕೆ ಶೇ.40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡತಕ್ಕದ್ದು. (ಕೈಪಿಡಿಯ ಮಾರ್ಗಸೂಚಿಯನ್ವಯ)
10. ಅನುಮೋದಿತ ವಿನ್ಯಾಸದ ಸೂಕ್ತ ಸ್ಥಳಗಳಲ್ಲಿ ನೀರು ಇಂಗುಗುಳಿ (water Recharge) ಮತ್ತು ಮಳೆ ನೀರು ಸಂಗ್ರಹಣೆ (Rain water harvesting pits) ಗಳನ್ನು ಗುರ್ತಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
11. ವಿನ್ಯಾಸ ಅಂಗೀಕಾರ ಸಂಬಂಧ ಇತರೆ ಯಾವುದೇ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕಾದ್ದಲ್ಲಿ ಅರ್ಜಿದಾರರಿಂದ ಅಂತಹ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.
12. ಅನುಮೋದಿತ ಬಡಾವಣೆಯಲ್ಲಿ ಕೊಳವೆ ಬಾವಿಯನ್ನು ಕೊರೆಯುವಾಗ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು. ಹಾಗೂ ತೆರೆದ ಕೊಳವೆ ಬಾವಿಗಳ ಬಗ್ಗೆ ಭೂಮಾಲೀಕರುಗಳು ಮತ್ತು ಸ್ಥಳೀಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿನಾಂಕ:-31-12-2012 ಮತ್ತು ದಿನಾಂಕ:-06-08-2014 ರಂದು ಸರ್ಕಾರವು ನೀಡಿರುವ ನಿರ್ದೇಶನಗಳಂತೆ ತಪ್ಪದೆ ಕ್ರಮವಹಿಸತಕ್ಕದ್ದು.
13. ಸದರಿ ಬಡಾವಣೆಯಲ್ಲಿ ಸುತ್ತಲೂ ಕಾಂಪೌಂಡ್ ನಿರ್ಮಿಸಿ, ಗೇಟನ್ನು ಅಳವಡಿಸಿ "ಗೇಟೆಡ್ ಕಮ್ಯುನಿಟಿ" ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಹಾಗೂ ಸದರಿ ಬಡಾವಣೆಯಲ್ಲಿನ ರಸ್ತೆ ಆಟದ ಮೈದಾನ /


14. ಈ ಅನುಮೋದಿತ ವಿನ್ಯಾಸ ನಕ್ಷೆಯಲ್ಲಿ ನಿಗಧಿಪಡಿಸಲಾದ ಅಳತೆಗಳಲ್ಲಿ ವ್ಯತ್ಯಾಸ ಇರುವುದು ಕಂಡು ಬಂದಲ್ಲಿ ಅದನ್ನು ಸೂಕ್ತವಾಗಿ ಸ್ಥಳದ ವಸ್ತು ಸ್ಥಿತಿಯ ಅಳತೆಗೆ ಅನುಗುಣವಾಗಿ ಪರಿಷ್ಕೃತ ವಿನ್ಯಾಸಕ್ಕೆ ಅನುಮೋದನೆ ಪಡೆದುಕೊಳ್ಳತಕ್ಕದ್ದು.
15. ಈ ಅನುಮೋದನೆಯು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವುದಕ್ಕೆ ಉಪಯೋಗಿಸಲು ಬರುವುದಿಲ್ಲ.
16. ನೈಸರ್ಗಿಕವಾಗಿ ಹರಿಯುವ ನದಿ / ಹಳ್ಳ ಹಾಗೂ ಕೆರೆ ಮುಂತಾದವುಗಳಿಗೆ ಬಡಾವಣೆಯ ಯಾವುದೇ ಮಲಿನ ನೀರನ್ನು ಹರಿಯಬಿಡಬಾರದು.
17. ವಿನ್ಯಾಸದ ತಾಂತ್ರಿಕ ಅನುಮೋದನೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಯು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಈ ತಾಂತ್ರಿಕ ಅನುಮೋದನೆ ತಾನಾಗಿ ರದ್ದುಗೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯು ವಿನ್ಯಾಸ ಅನುಮೋದಿಸಿದಲ್ಲಿ ಸೂಕ್ತ ಕ್ರಮವಹಿಸತಕ್ಕದ್ದು.
18. ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಕಚೇರಿಯು ಜವಾಬ್ದಾರಿಯಾಗಿರುವುದಿಲ್ಲ.
19. ಕಂದಾಯ ಇಲಾಖೆಯಿಂದ ನೀಡಿರುವ ದಾಖಲೆ ಮತ್ತು ಸರ್ವೆ ನಕ್ಷೆಯನ್ವಯ ವಿನ್ಯಾಸ ತಯಾರಿಸಲಾಗಿರುತ್ತದೆ.
20. ಸದರಿ ವಿನ್ಯಾಸಕ್ಕೆ ತಮ್ಮ ಕಾರ್ಯಾಲಯದಿಂದ ಅನುಮೋದನೆಯಾದ ನಂತರ, ತಮ್ಮ ಕಾರ್ಯಾಲಯದ ಅನುಮೋದನೆ ಪತ್ರ ಹಾಗೂ ತಮ್ಮ ಕಾರ್ಯಾಲಯದಿಂದ ಅನುಮೋದಿತ ವಿನ್ಯಾಸ ನಕ್ಷೆಯ ಪ್ರತಿಯನ್ನು ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

ಹೆಚ್ಚುವರಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ,
ಧಾರವಾಡ

ಪ್ರತಿಯನ್ನು:-

1) ತಾಂತ್ರಿಕವಾಗಿ ಅನುಮೋದಿಸಲಾದ ವಿನ್ಯಾಸ ನಕ್ಷೆಯ 3 ಪ್ರತಿಗಳೊಂದಿಗೆ **ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ ಕಾರ್ಯಾಲಯ, ದೊಡ್ನಳ್ಳಿ..., ತಾ:ಶಿರಸಿ ಜಿ:ಉತ್ತರ ಕನ್ನಡ.,** ಇವರಿಗೆ ನಿಬಂಧನೆಗಳನ್ನು ಅನುಸರಿಸಿ ವಿನ್ಯಾಸಗಳನ್ನು ಅನುಮೋದಿಸಿ ನಿಯಮಾನುಸಾರ ವಿನ್ಯಾಸ ಬಿಡುಗಡೆ ಮಾಡಲು ಕಳುಹಿಸಿದೆ.
2) ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು., ಇವರಿಗೆ ತಾಂತ್ರಿಕ ಅನುಮೋದಿತ ವಿನ್ಯಾಸ ನಕ್ಷೆಯ ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಲಾಗಿದೆ.
3) **ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಶಿರಸಿ.,** ಇವರಿಗೆ ತಾಂತ್ರಿಕ ಅನುಮೋದಿತ ವಿನ್ಯಾಸ ನಕ್ಷೆಯೊಂದಿಗೆ ಕಳುಹಿಸುತ್ತಾ ನಿಯಮಾನುಸಾರ ಇಲಾಖಾ ಕಾರ್ಯಕ್ರಮದನ್ವಯ ಸದರಿ ವಿನ್ಯಾಸ ನಕ್ಷೆಯನ್ನು ಮೂಲ ನಕ್ಷೆಯಲ್ಲಿ ಕಾಲೋಚಿತಗೊಳಿಸಿ ಮೂಲ ನಕ್ಷೆಯನ್ನು ಈ ಪತ್ರ ತಲುಪಿದ 7 ದಿನಗಳೊಳಗಾಗಿ ಈ ಕಚೇರಿಗೆ ಸಲ್ಲಿಸಲು ಈ ಮೂಲಕ ನಿಮಗೆ ಸೂಚಿಸಲಾಗಿದೆ.
4) ಅರ್ಜಿದಾರರಾದ **ಶ್ರೀ. ಹಿಫ್ಜುರೆಹಮಾನ ಅಬ್ದುಲ್ ವಾಹಿದ ಮಾಯಿನಳ್ಳಿ, ಸಾ:ಮುಸ್ಲಿಂಗಲ್ಲ ತಾ:ಶಿರಸಿ, ಜಿ:ಉತ್ತರ ಕನ್ನಡ.,** ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ. ಹಾಗೂ ಅನುಮೋದಿತ ವಿನ್ಯಾಸ ನಕ್ಷೆಯ ಪ್ರತಿಯನ್ನು **ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ ಕಾರ್ಯಾಲಯ, ದೊಡ್ನಳ್ಳಿ., ತಾ:ಶಿರಸಿ ಜಿ:ಉತ್ತರ ಕನ್ನಡ.,** ಇವರಿಂದ ನಿಬಂಧನೆಗಳನ್ನು ಅನುಸರಿಸಿ ಪಡೆಯಲು ಸೂಚಿಸಿದೆ.
5) ವಿನ್ಯಾಸ ಪತ್ರಗಳ ಮಾಸ್ಟರ್ ಕಡತಕ್ಕೆ ಮಾಹಿತಿಗಾಗಿ ನಕ್ಷೆಯ ಪ್ರತಿಯೊಂದಿಗೆ ಕಳುಹಿಸಲಾಗಿದೆ.
6) ಕಛೇರಿ ಪ್ರತಿ.

ಹೆಚ್ಚುವರಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ,
ಧಾರವಾಡ


NORTH
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ
16/03/2019
1:1000
-03-2019
1 2 3 4 5 6 7 8 9 10 11 12 13
24 25 23 26 22 27 21 28 20 29 19 30 18 31 17 32 16 33 15 34 14 35
46 47 45 48 44 49 43 50 42 51 41 52 40 53 39 54 38 55 37 56 36 57
68 69 67 70 66 71 65 72 64 73 63 74 62 75 61 76 60 77 59 78 58 79
89 90 88 91 87 92 86 93 85 94 84 95 83 82 81 80
102 103 101 100 99
96 97 98